ಸಾಕ್ಷಿಯನ್ನು ದಿನಾಂಕಃ 26/09/2024 ರಂದು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇಲೆ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ಎದುರುದಾರ ಪರ ವಕೀಲರಿಂದಃ**

ನನ್ನ ಹೆಸರು ಜೀವನಸಾಬ. ನಾನು 5 ನೇ ತರಗತಿಯವರೆಗೆ ಶಾಲೆಗೆ ಹೋಗಿದ್ದೇನೆ. ನನ್ನ ಅಕ್ಕ ಅಲ್ಲಾಬಿ ಸಹ 5 ನೇ ತರಗತಿಯವರೆಗೆ ಶಾಲೆಗೆ ಹೋಗಿದ್ದಾರೆ. ನಾನು ಮತ್ತು ನನ್ನ ಅಕ್ಕ ಕುರಡಗಿ ಗ್ರಾಮದಲ್ಲಿ ಜನಿಸಿದ್ದೇವೆ. ನಮ್ಮ ತಂದೆ ಹೆಸರು ಪೀರಸಾಬ. ನನ್ನ ತಂದೆಗೆ 4 ಜನ ಅಣ್ಣ ತಮ್ಮಂದಿರು. ನಿಮ್ಮ ತಂದೆ 40-50 ವರ್ಷದ ಹಿಂದೆ ಕುರುಡಗಿಯಲ್ಲಿ ವಾಸವಾಗಿದ್ದೇವೆ ಎಂದರೆ ಸರಿ. ಅವರು ತೀರಿಕೊಂಡ ನಂತರ ನಾವು ಸಹ ಅಲ್ಲೇ ವಾಸವಾಗಿದ್ದೇವೆ ಎಂದರೆ ಸರಿ.

ಹಸನಸಾಬ ನನ್ನ ದೊಡ್ಡಪ್ಪನಾಗಬೇಕು. ಇಮಾಮಬಿ ಹಸನಸಾಬರವರ ಹೆಂಡತಿ. ಜೀವನಸಾಬ ಮತ್ತು ಬೀಬಿಜಾನ ಸದರಿ ಹಸನಸಾಬ ಮತ್ತು ಇಮಾಮಬಿ ರವರ ಮಕ್ಕಳು ಎಂದರೆ ಸರಿ. ಕೆಳಗಿನ ನ್ಯಾಯಾಲಯದಲ್ಲಿ ಇಮಾಮಬಿ , ಜೀವನಸಾಬ ಮತ್ತು ಬೀಬಿಜಾನ ಇವರು ಹಾಕಿದ ದಾವೆಯಲ್ಲಿ ನಿಮಗೆ ನ್ಯಾಯಾಲಯದಿಂದ ಕುರಡಗಿ ಊರಲ್ಲಿರುವ ಮನೆಯಲ್ಲಿ ಸಮನ್ಸ ಜಾರಿಯಾಗಿದೆ ಎಂದರೆ ನನಗೆ ಏನು ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ಪ್ರಕರಣದಲ್ಲಿ ನೀವು ಕುಕನೂರ ವಕೀಲರಿಗೆ ಕೊಟ್ಟು ದಿಃ 12/12/2017 ರಲ್ಲಿ ಹಾಜರಾಗಿದ್ದೀರಿ ಎಂದರೆ ಹಾಕಿದ್ದೇವು ಎಂದು ಹೇಳುತ್ತಾರೆ. ಸದರಿ ದಾವೆಯಲ್ಲಿ ತಕರಾರು ಹಾಕುತ್ತೇನೆ ಎಂದು ನಿಮ್ಮ ವಕೀಲರು ಒಂದು ಅರ್ಜಿಯನ್ನು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ನೀವು ಬರದೆ ಇರುವುದರಿಂದ ದಿಃ 20/03/2018 ಕ್ಕೆ ನಿಮ್ಮ ತಕರಾರು ಇಲ್ಲ ಎಂದು ನ್ಯಾಯಾಲಯದವರು ಆದೇಶ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿ ಪರ ಎಲ್ಲಾ ಸಾಕ್ಷಿ ವಿಚಾರಣೆ ಮಾಡಿದ ನಂತರ ನ್ಯಾಯಾಲಯದವರು ದಿನಾಂಕ 28/08/2018 ಕ್ಕೆ ಸದರಿ ದಾವೆ ಡಿಕ್ರಿ ಆಗಿದೆ ಎಂದರೆ ವಕೀಲರು ನಮಗೆ ಏನು ಹೇಳಿಲ್ಲ ಎಂದು ಹೇಳುತ್ತಾರೆ. ಸದರಿ ಆದೇಶದ ಪ್ರಕಾರ 3 ತಿಂಗಳ ಒಳಗೆ ಜಾಗ ಖಾಲಿ ಮಾಡಿಕೊಡಬೇಕು ಎಂದು ಆದೇಶ ಆಗಿದೆ ಎಂದರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

ಸದರಿ ದಾವೆ ಮುಗಿದ ನಂತರ ಡಿಕ್ರಿ ಪ್ರಕಾರ ವಾದಿಯರು ದರಕಾಸ್ತ ಅರ್ಜಿ ಹಾಕಿಕೊಂಡಿದ್ದರು ಅದರಲ್ಲಿ ಸಹ ನಿಮಗೆ ನೋಟಿಸುಗಳು ಜಾರಿಯಾಗಿವೆ ಎಂದರೆ ಸಾಕ್ಷಿ ಒಂದೇ ನೋಟಿಸು ಬಂದಿದೆ ಎಂದು ಹೇಳುತ್ತಾರೆ. ದರಕಾಸ್ತ ಅರ್ಜಿಯಲ್ಲಿ 3 ಮಂದಿಗೂ ಸಹ ನೋಟಿಸು ಜಾರಿಯಾಗಿದೆ , ಆದರೂ ಸಹ ಒಂದೇ ಬಂದಿದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸದರಿ ದರಕಾಸ್ತ ಅರ್ಜಿಯಲ್ಲಿ ನ್ಯಾಯಾಲಯದ ವತಿಯಿಂದ ಕಬ್ಜಾವನ್ನು ಪಡೆದುಕೊಂಡಿದ್ದರಿಂದ ದಿಃ 04/08/2023 ಕ್ಕೆ ಸದರಿ ಅರ್ಜಿ ಮುಕ್ತಾಯಗೊಂಡಿದೆ ಎಂದರೆ ಸರಿ.

ಸದರಿ ದಾವೆ ಡಿಕ್ರಿ ಆದ ನಂತರ ನಿಮಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಒಂದು ದಿನ ಆದರೂ ನ್ಯಾಯಾಲಯಕ್ಕೆ ಬಂದಿದ್ದೀರಾ ಎಂದರೆ ಇಲ್ಲ ಎಂದು ಹೇಳುತ್ತಾರೆ. ಸದರಿ ದಾವೆ ಬಗ್ಗೆ ಎಲ್ಲಾ ಗೊತ್ತಿದ್ದರೂ ಸಹ ಮತ್ತು ಡಿಕ್ರಿ ಆದ ಬಗ್ಗೆ ಗೊತ್ತಿದ್ದರೂ ಸಹ 5 ವರ್ಷದ ತನಕ ಸುಮ್ಮನಿದ್ದು , ಈಗ ಈ ಮೇಲ್ಮನವಿಯನ್ನು ಸಲ್ಲಿಸದ್ದೀರಿ ಎಂದರೆ ಸರಿಯಲ್ಲ. ನಿಮಗೆ ಎಲ್ಲಾ ಗೊತ್ತಿದ್ದರೂ ಸಹ ಕೋವಿಡ ಬಂದಿದ್ದರಿಂದ ಮೇಲ್ಮನವಿ ಸಲ್ಲಿಸಲು ಆಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಅರ್ಜಿಯಲ್ಲಾಗಲಿ ಮತ್ತು ಪ್ರಮಾಣ ಪತ್ರದಲ್ಲಾಗಲಿ ಬರೆದಿರುವ ಎಲ್ಲಾ ವಿಷಯಗಳು ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ದುಡಿಯಲಿಕೆ ಹೋಗಿದ್ದೀರಿ ಎಂದು ಹೇಳಿದ್ದೀರಿ ಯಾವ ಊರಿಗೆ ಹೋಗಿದ್ದೀರಿ ಎಂದು ಕೇಳಲಾಗಿ ಗೋವಾಕ್ಕೆ ಹೋಗಿದ್ದೆ ಎಂದು ಹೇಳುತ್ತಾರೆ. ಗೋವಾಕ್ಕೆ ದುಡಿಯಲಿಕ್ಕೆ ಹೋಗಿದ್ದೇವು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸದರಿ ದಾವಾ ಆಸ್ತಿಯನ್ನು ಸರ್ಕಾರದವರು ಕೊಟ್ಟಿದ್ದರಿಂದ ನಿಮಗೆ ಯಾವುದೇ ಹಿಸ್ಸೆ ಇಲ್ಲ ಎಂದರೆ ಸರಿಯಲ್ಲ. ನಿಮಗೂ ದಾವಾ ಆಸ್ತಿಯಲ್ಲಿ ಹಕ್ಕು ಇದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಪ್ರಮಾಣ ಪತ್ರದಲ್ಲಿ ಹೊಂಬಳದಲ್ಲಿ ವಾಸವಾಗಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಹೊಂಬಳ ಗ್ರಾಮದಲ್ಲಿ ವಾಸವಾಗಿದ್ದೇವೆ ಎಂದು ತೋರಿಸಲು ದಾಖಲೆ ಇದ್ದಾವೆ ಎಂದರೆ ಸಾಕ್ಷಿ ಪಂಚಾಯತಿ ದಾಖಲೆಗಳು ಇವೆ ಎಂದು ಹೇಳುತ್ತಾರೆ. ಆಧಾರ ಕಾರ್ಡ ಮತ್ತು ಚುನಾವಣಾ ಗುರುತಿನ ಚೀಟಿ ಇಲ್ಲ ಎಂದು ಹೇಳುತ್ತಾರೆ. ಹೊಂಬಳ ಗ್ರಾಮದಲ್ಲಿ

ವಾಸವಾಗಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಎದುರುಗಾರರಿಗೆ ತೊಂದರೆ ಕೊಡಲು ಸುಳ್ಳು ಮೇಲ್ಮನವಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮುಂದಿನ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ**

**ಮರುವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

(ಶ್ರೀಮತಿ ಪಿ. ಆರ್ ಪಾಟೀಲ)
26.09.2024
**ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ**